## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ** | : | **864 (1111)** |
| **ಸದಸ್ಯರ ಹೆಸರು** | : | **ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **13.03.2020** |
| **ಉತ್ತರಿಸುವವರು** | : | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿ ಘನ ತ್ಯಾಜ್ಯ ವಿಲೇವಾರಿ ಮಾಡಲು ಪ್ರತಿ ಗ್ರಾಮ ಪಂಚಾಯಿತಿಗಳಿಗೆ 20 ಲಕ್ಷ ರೂ ಅನುದಾನ ಒದಗಿಸಲು ನಿರ್ಧರಿಸಿರುವುದು ನಿಜವೇ; | ಹೌದು.<br>ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯ ಮಾರ್ಗಸೂಚಿಯನ್ವಯ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಗಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ಕುಟುಂಬಗಳ ಆಧಾರದ ಮೇಲೆ ಕೆಳಕಂಡಂತೆ ಅನುದಾನವು ನಿಗದಿಯಾಗಿರುತ್ತದೆ.<br>• 0-150 ಕುಟುಂಬಗಳಿರುವ ಗ್ರಾ.ಪಂ.ಗಳಿಗೆ ರೂ.5.00ಲಕ್ಷಗಳು<br>• 151-300 ಕುಟುಂಬಗಳಿರುವ ಗ್ರಾ.ಪಂ.ಗಳಿಗೆ ರೂ.7.00ಲಕ್ಷಗಳು<br>• 301- 500 ಕುಟುಂಬಗಳಿರುವ ಗ್ರಾ.ಪಂ.ಗಳಿಗೆ ರೂ.12.00ಲಕ್ಷಗಳು<br>• 500ಕ್ಕೂ ಮೇಲ್ಪಟ್ಟ ಕುಟುಂಬಗಳಿರುವ ಗ್ರಾ.ಪಂ.ಗಳಿಗೆ ರೂ.20.00ಲಕ್ಷಗಳ ಅನುದಾನ ಬಳಸಿಕೊಳ್ಳಲು ಅವಕಾಶ ನೀಡಲಾಗಿದೆ. |
| (ಆ) | ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಗ್ರಾಮ ಪಂಚಾಯಿತಿಗಳಿಗೆ; ಬೆಳಗಾವಿ ಜಿಲ್ಲೆಯ ಎಷ್ಟು ಗ್ರಾಮ ಪಂಚಾಯಿತಿಗಳಿಗೆ ಘನ ತ್ಯಾಜ್ಯ ವಿಲೇವಾರಿಗೆ ಅನುದಾನ ಒದಗಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ; ಅವು ಯಾವುವು; (ವಿವರ ನೀಡುವುದು) | ಬೆಳಗಾವಿ ಜಿಲ್ಲೆಯ 52 ಗ್ರಾಮ ಪಂಚಾಯತಿಗಳಿಗೆ ಘನ ತ್ಯಾಜ್ಯ ವಿಲೇವಾರಿಗೆ ಅನುದಾನ ಒದಗಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ.<br>(**ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.**) |
| (ಇ) | ಈಗಾಗಲೇ ಎಷ್ಟು ಗ್ರಾಮ ಪಂಚಾಯಿತಿಗಳಿಗೆ ಘನ ತ್ಯಾಜ್ಯ ವಿಲೇವಾರಿಗೆ ಅನುದಾನ ಒದಗಿಸಲಾಗಿದೆ; ಅವು ಯಾವುವು; ಯೋಜನೆಯ ಅನುಷ್ಠಾನವು ಯಾವ ಹಂತದಲ್ಲಿದೆ; ಯೋಜನೆಯನ್ನು | ಬೆಳಗಾವಿ ಜಿಲ್ಲೆಯ 52 ಗ್ರಾಮ ಪಂಚಾಯತಿಗಳಿಗೆ ಘನ ತ್ಯಾಜ್ಯ ವಿಲೇವಾರಿಗೆ ಅನುದಾನ ಒದಗಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ. (**ಅನುಬಂಧ-1ರಲ್ಲಿ ನೀಡಲಾಗಿದೆ.**)<br>**ಘನ ತ್ಯಾಜ್ಯ ನಿರ್ವಹಣೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ತೆಗೆದುಕೊಂಡ ಕ್ರಮಗಳು:**<br>1) ಘನ ತ್ಯಾಜ್ಯ ನಿರ್ವಹಣೆಗೆ ಜಿಲ್ಲಾ ಮಟ್ಟದಲ್ಲಿ |

| | | |
|---|---|---|
| | ಪರಿಣಾಮಕಾರಿಯಾಗಿ ಅನುಷ್ಠಾನಗೊಳಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | ಖಾಲಿಯಿದ್ದಂತಹ 28 ಹುದ್ದೆಗಳಿಗೆ ಜಿಲ್ಲಾ ಸಮಾಲೋಚಕರನ್ನು ನೇಮಕ ಮಾಡಿ ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಿಕೊಳ್ಳಲಾಗಿದೆ.<br>2) ಜಿಲ್ಲೆಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯ ಡಿಪಿಆರ್ ಸಿದ್ಧಪಡಿಸುವ ಕುರಿತು ತರಬೇತಿ, ಪರಿಶೀಲನೆ ಹಾಗೂ ಅನುಷ್ಠಾನದ ಉಸ್ತುವಾರಿ ನೋಡಿಕೊಳ್ಳಲು ರಾಜ್ಯ ಕಛೇರಿಯಲ್ಲಿ ನುರಿತ 20 ಘನ ತ್ಯಾಜ್ಯ ನಿರ್ವಹಣೆಯ ಸಮಾಲೋಚಕರನ್ನು ನೇಮಕ ಮಾಡಲಾಗಿದೆ.<br>3) ಸ್ವಚ್ಛ ಮೇವ ಜಯತೇ ಆಂದೋಲನದಡಿ ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯಗಳ ನಿರ್ಮಾಣ, ಬಳಕೆ, ಸ್ವಚ್ಛತೆ ಹಾಗೂ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯ ಕುರಿತು ಪೋಸ್ಟರ್ ಮುದ್ರಣ, ಗೋಡೆ ಬರಹ, ಸ್ವಚ್ಛತಾರಥ ರೇಡಿಯೋಗಳಲ್ಲಿ ಪ್ರಸಾರ, ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಲ್ಲಿ ಅಳವಡಿಸಿರುವ ಟಿವಿ ಸ್ಕ್ರೀನ್‌ಗಳಲ್ಲಿ ಜಾಹೀರಾತು, ಶಾಲಾ ಮಕ್ಕಳಿಂದ ಜಾಥ ಕಾರ್ಯಕ್ರಮ, ಸ್ವಚ್ಛತಾ ರ್‍ಯಾಲಿ / ಜಾಥಕಾರ್ಯಕ್ರಮ ಸ್ವಚ್ಛತೆಗಾಗಿ ಶ್ರಮದಾನ ಪ್ರಬಂಧ ಸ್ಪರ್ಧೆಗಳ ಆಯೋಜನೆ, ವಿಶೇಷ ಗ್ರಾಮ ಸಭೆಗಳ ಆಯೋಜನೆ ಮುಂತಾದ ಐ.ಇ.ಸಿ. ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>4) ರಾಜ್ಯ/ ವಿಭಾಗ ಹಾಗೂ ಜಿಲ್ಲಾ ಮಟ್ಟದಲ್ಲಿ ಗ್ರಾ.ಪಂ. ಅಧಿಕಾರಿ ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ಕಾರ್ಯಕ್ರಮಗಳು ಮತ್ತು ಕಲಿಕಾ ಪ್ರವಾಸಗಳನ್ನು ಆಯೋಜಿಸಲಾಗಿರುತ್ತದೆ. |
| (ಈ) | ಸರ್ಕಾರವು ಮುಂದಿನ ಆರ್ಥಿಕ ವರ್ಷದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಇನ್ನೂ ಎಷ್ಟು ಗ್ರಾಮ ಪಂಚಾಯಿತಿಯನ್ನು ಸದರಿ ಯೋಜನೆಯಡಿ ತರಲು ನಿರ್ಧರಿಸಲಾಗಿದೆ; (ವಿವರ ನೀಡುವುದು) | ಜಿಲ್ಲೆಯಲ್ಲಿ ಒಟ್ಟು 505 ಗ್ರಾಮ ಪಂಚಾಯಿತಿಗಳಲ್ಲಿ ಈಗಾಗಲೇ 55 ಘನ ತ್ಯಾಜ್ಯ ನಿರ್ವಹಣೆಗೆ ಅನುಮೋದನೆ ಪಡೆಯಲಾಗಿರುತ್ತದೆ. 2020-21ನೇ ಸಾಲಿನಲ್ಲಿ ಬಾಕಿ ಎಲ್ಲಾ ಗ್ರಾ.ಪಂ.ಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯನ್ನು ಅನುಷ್ಠಾನ ಮಾಡಲು ಗುರಿ ಹೊಂದಲಾಗಿದೆ. |
| ಉ) | ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸದರಿ ಯೋಜನೆಗೆ ಸರ್ಕಾರವು ಎಷ್ಟು ಅನುದಾನವನ್ನು ಮೀಸಲಿರಿಸಿದೆ? (ವಿವರ ನೀಡುವುದು) | ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಗೆ 2019-20ನೇ ಸಾಲಿಗೆ ಪರಿಷ್ಕೃತ ಆಯವ್ಯಯದಂತೆ ರೂ.488.71 ಕೋಟಿಗಳನ್ನು ಮೀಸಲಿರಿಸಲಾಗಿದೆ. |

**(ಕೆ.ಎಸ್.ಈಶ್ವರಪ್ಪ)**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಅನುಬಂಧ -1

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: ೮೬೪ (1111)

ಘನ ತ್ಯಾಜ್ಯ ವಿಲೇವಾರಿಗೆ ಅನುಮೋದನೆ ನೀಡಿರುವ ಗ್ರಾಮ ಪಂಚಾಯಿತಿಗಳ ವಿವರ

**DISTRICT: BELAGAVI** **(in Lakhs)**

| Sl.No | Taluk | GP | Administrative Sanctioned amount | Sanctioned amount 1st installment | Completed/ Under Progress |
|---|---|---|---|---|---|
| 1 | Khanapur | Devalatti | 20.00 | 10.00 | Under Progress |
| 2 | Gokak | Dhupadal | 20.00 | 10.00 | Under Progress |
| 3 | Khanapur | Nandagad | 20.00 | 10.00 | Under Progress |
| 4 | | Ittagi | 20.00 | 10.00 | Under Progress |
| 5 | Athni | Athni (Sankonatti) | 20.00 | 10.00 | Under Progress |
| 6 | | mangasuli | 20.00 | 10.00 | Under Progress |
| 7 | Hukkeri | Hebbal | 20.00 | 10.00 | Under Progress |
| 8 | Athni | Kakamari | 16.78 | 8.39 | Under Progress |
| 9 | | Nandagav | 20.00 | 10.00 | Under Progress |
| 10 | Bailhongal | Dodavad | 20.00 | 10.00 | Under Progress |
| 11 | | Belavadi | 19.20 | 9.60 | Under Progress |
| 12 | | Deshanur | 20.00 | 10.00 | Under Progress |
| 13 | Chikodi | Shiragaon | 18.87 | 9.44 | Under Progress |
| 14 | | Jatrat | 18.55 | 9.28 | Under Progress |
| 15 | Gokak | Koujalagi | 18.13 | 9.07 | Under Progress |
| 16 | Hukkeri | Godageri | 20.00 | 10.00 | Under Progress |
| 17 | | Yamakanamaradi | 20.00 | 10.00 | Under Progress |
| 18 | | Salamwadi | 18.85 | 9.43 | Under Progress |
| 19 | | Daddi | 19.54 | 9.77 | Under Progress |
| 20 | Rayabag | Hundigund | 19.00 | 9.50 | Under Progress |
| 21 | Athni | Kagawadi | 19.53 | 9.77 | Under Progress |
| 22 | Belagavi | Sulebhavi | 20.00 | 10.00 | Under Progress |
| 23 | | Nelaji | 20.00 | 10.00 | Under Progress |
| 24 | | Kardiguddi | 18.20 | 9.10 | Under Progress |
| 25 | | Machhe | 20.00 | 10.00 | Under Progress |
| 26 | | Morihadh | 20.00 | 10.00 | Under Progress |
| 27 | Bailahongal | Sampagav | 20.00 | 10.00 | Under Progress |
| 28 | | Hanarahatti | 20.00 | 10.00 | Under Progress |
| 29 | | Tigadi | 16.00 | 8.00 | Under Progress |
| 30 | | Dewaratigihalli | 14.52 | 7.26 | Under Progress |
| 31 | Chikodi | Jainapur | 19.84 | 9.92 | Under Progress |
| 32 | | Ankali | 20.00 | 10.00 | Under Progress |
| 33 | Rayabag | Kappalaguddi | 20.00 | 10.00 | Under Progress |
| 34 | | Yadav | 16.36 | 8.18 | Under Progress |
| 35 | | Raybag | 20.00 | 10.00 | Under Progress |
| 36 | Savadathi | InamHongal | 20.00 | 10.00 | Under Progress |
| 37 | | Badli | 11.14 | 5.57 | Under Progress |
| 38 | | Yakundi | 19.75 | 9.88 | Under Progress |
| 39 | Gokak | Kulagod | 20.00 | 10.00 | Under Progress |
| 40 | | Yadawad | 20.00 | 10.00 | Under Progress |
| 41 | Gokak | Gosbadh | 18.66 | 9.33 | Under Progress |
| 42 | | Tukanatte | 20.00 | 10.00 | Under Progress |
| 43 | Khanapur | Kadatan-Bagewadi | 19.00 | 9.50 | Under Progress |
| 44 | Belagavi | Yellur | 20.00 | 10.00 | Under Progress |
| 45 | Rayabag | Parmanam-Dawadi | 19.38 | 9.69 | Under Progress |
| 46 | Ramadurg | K.Chandargi | 19.58 | 9.79 | Under Progress |
| 47 | Hukkeri | Nadisosi | 18.68 | 9.34 | Under Progress |
| 48 | Hukkeri | B Bagewadi | 12.13 | 12.13 | Under Progress |
| 49 | Savadatthi | Shivapura | 9.27 | 9.27 | Under Progress |
| 50 | Chikkodi | Chandhor | 10.28 | 10.28 | Under Progress |
| 51 | Belagavi | Mutthaga | 13.73 | 13.73 | Under Progress |
| 52 | Athani | Shiraguppa | 13.86 | 13.86 | Under Progress |